ಕಾರಣ ಪರೀಕ್ಷೆ ಮುಂದೂಡಲು ವಿದ್ಯಾರ್ಥಿಗಳು ವಿನಂತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಏನು ಕ್ರಮ ಕೈಗೊಂಡಿದೆ;

ಇ) ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಸರಿಯಾದ ಲ್ಯಾಬೋರೇಟರಿ ಸಾಮಗ್ರಿಗಳು ಇಲ್ಲದೆ ಪ್ರಾಕ್ಟಿಕಲ್ ಎಕ್ಸಾಮ್‌ಗಳಿಗೆ ತೊಂದರೆಯಾಗುತ್ತಿರುವುದು ನಿಜವೆ;

ಈ) ಹಾಗಿದ್ದಲ್ಲಿ, ಸರ್ಕಾರವು ಆ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ) ಸ್ಥಳೀಯ ವಿಚಾರಣ ಸಮಿತಿಯ ವರದಿ ಪ್ರಕಾರ ಭೌತಶಾಸ್ತ್ರ ಹಾಗೂ ರಸಾಯನ ಶಾಸ್ತ್ರ ವಿಭಾಗಗಳ ನವೀನ ಉಪಕರಣಗಳಿಗೆ ಪ್ರತಿ ವರ್ಷ 50,000 ರೂ.ಗಳನ್ನು ಖರ್ಚು ಮಾಡುವಂತೆ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ. ರಸಾಯನಶಾಸ್ತ್ರಕ್ಕಾಗಿ ಒಂದು ಹೆಚ್ಚುವರಿ ಪ್ರಯೋಗಾಲಯವನ್ನು ಒದಗಿಸಲಾಗುವುದು, ಮತ್ತು ಪ್ರತ್ಯೇಕವಾಗಿ ಪ್ರಾಣಿಶಾಸ್ತ್ರ ಹಾಗೂ ಸಸ್ಯಶಾಸ್ತ್ರ ಮ್ಯೂಜಿಯಂನ್ನು ಒದಗಿಸಲಾಗುವುದು.

Typhoid cases in Arasikere Taluk

997 (126): Sri. K.V. RAVEENDRANATH BABU

Will the Chief Minister be pleased to state

a) Number of Typhoid cases in Arasikere Taluk and treated during the last two years;

b) The reason for the break out and action taken to prevent it?

Sri M. Veerappa Moily (Chief Minister):–

a) 27 cases have been reported in Arasikere Taluk for the last two years, all the cases have been treated.

b) Use of contaminated water and polluted environment. The Municipal Authorities and Mandal Panchayat were mobilised and drinking water sources were super Chlorinated.

T.A.B. Vaccine was administered where out break was reported.

ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿರುವ ಖಾಸಗೀ ಕಾಲೇಜುಗಳಿಂದ ಶುಲ್ಕ ಪಾವತಿ

998 (127): ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರ್)